**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**
**ಓ.ಎಸ್. ಸಂಖ್ಯೆ 284 /2015**
**ದಿನಾಂಕ 05.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಡಿ.ಡಬ್ಲೂ 3**

| | | |
|---|---|---|
| ಸಾಕ್ಷಿದಾರರ ಹೆಸರು | - | ಉಗ್ರಮೂರ್ತಿ. |
| ತಂದೆಯ ಹೆಸರು | - | ಲೇಟ್ ನರಸಿಂಹಯ್ಯ |
| ವಯಸ್ಸು | - | 55 ವರ್ಷ |
| ವೃತ್ತಿ | - | ವಕೀಲರು |
| ವಾಸ ಸ್ಥಳ | - | ಪಾವಗಡ |

**ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀ ಪಿ.ವಿ.ವೈ ವಕೀಲರಿಂದಃ**

ನಾನು ಈ ದಾವಾದಲ್ಲಿ ಪ್ರತಿವಾದಿಯ ಪರವಾಗಿ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯನ್ನು ಸಾಕ್ಷ್ಯ ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಯಿಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸಿ ಸಹಿ ಮಾಡಿರುತ್ತೇನೆ.

ನಾನು ಮುಂದಿನ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕಾಗಿ ಕೋರಿಕೊಳ್ಳುತ್ತೇನೆ.

ಸಾಕ್ಷಿಗೆ ನಿಡಿ-1 ವಿಲ್ ಯಾ ಮರಣ ಶಾಸನವನ್ನು ತೋರಿಸಲಾಯಿತು. ಸಾಕ್ಷಿ ಸದರಿ ದಾಖಲೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ನಿಡಿ-1 ದಾಖಲೆಗೆ ನಾನು ಸಹಿ ಮಾಡುವಾಗ ನನ್ನ ಸಮಕ್ಷಮ ಗಂಗಮ್ಮ ಸಹಿ ಮಾಡಿದ್ದಾರೆ ಹಾಗೂ ದಾಖಲೆಗೆ ಸಾಕ್ಷಿಯಾಗಿ ಸುಬ್ಬರೆಡ್ಡಿ ಎಂಬುವವರು ಸಹಿ ಮಾಡಿದ್ದಾರೆ ಹಾಗೂ ದಾಖಲೆಯನ್ನು ಬರೆದ ರಾಜಗೋಪಾಲ ರೆಡ್ಡಿ ರವರು ದಾಖಲೆ ಬರೆದ ಬಗ್ಗೆ ಸಹಿ ಮಾಡಿರುತ್ತಾರೆ. ರಾಜಗೋಪಾಲ ರೆಡ್ಡಿ ರವರ ಸಹಾಯಕರಾದ ರಾಮಚಂದ್ರಪ್ಪ ಎನ್ನುವವರು ನಿಡಿ-1 ದಾಖಲೆಗೆ ಸಹಿ ಮಾಡಿದ್ದಾರೆ. ಗಂಗಮ್ಮ ರವರು ಸಹಿ ಮಾಡಿದಾಗ ನಾನು ಮತ್ತು ಸಾಕ್ಷಿಗಳು ಹಾಗೂ ಪತ್ರಬರಹಗಾರರು ಮತ್ತು ಅವರ ಸಹಾಯಕರು ನೋಡಿರುತ್ತೇವೆ ನಾನು ಸಹಿ ಮಾಡಿದ್ದನ್ನು ಗಂಗಮ್ಮ, ಸಾಕ್ಷಿಗಳು ಮತ್ತು ಪತ್ರ ಬರಹಗಾರರು ಹಾಗೂ ಅವರ ಸಹಾಯಕರು

ನೋಡಿರುತ್ತಾರೆ. 2 ನೇ ಸಾಕ್ಷಿದಾರರ ಸಹಿ ಮಾಡುವ ಕಾಲಕ್ಕೆ ನಾನು ಮತ್ತು ಗಂಗಮ್ಮ ಹಾಗೂ ಪತ್ರಬರಹಗಾರರು ಮತ್ತು ಅವರ ಸಹಾಯಕರು ನೋಡಿರುತ್ತಾರೆ. ಪತ್ರ ಬರಹಗಾರರು ಸಹಿ ಮಾಡಿದ್ದನ್ನು ಗಂಗಮ್ಮ ಮತ್ತು ರಾಮಚಂದ್ರ ರೆಡ್ಡಿ ಹಾಗೂ ಸುಬ್ಬರೆಡ್ಡಿ ಮತ್ತು ನಾನು ನೋಡಿದ್ದೇನೆ.

**ಪಾಟೀ ಸವಾಲುಃ ವಾದಿ ಪರ ಶ್ರಿ.ಐ.ಆರ್.ಎಲ್ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ . ಹೇ. ಕೇ. ಸರಿ ಇದೆ.**

**ಅಪರ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ.,**
**ಪಾವಗಡ**